**ನಿಮ್ಮ ಸೃಜನಶೀಲತೆಯನ್ನು ಕೆಣಕುತ್ತಿತ್ತೆ? 'ಅರೆ! ನನ್ನ ಲೋಕವೇ ಬೇರೆ' ಅಂತ ಅನಿಸಿತ್ತೆ? ಯಾಕೆಂದರೆ ನಿಮ್ಮದು ಅವರೆಲ್ಲರಿಗಿಂತ ವಿಭಿನ್ನವಾದ ದಾರಿ.**

ನಾನು ಅದೃಷ್ಟವಂತ. ನನ್ನ ವಾರಿಗೆಯ ಲೇಖಕರು ನನಗಿಂತಲೂ ಚೆನ್ನಾಗಿ ಬರೆಯುತ್ತಿದ್ದರು. ಹಾಗೆಯೇ ಸಾಹಿತ್ಯದ ರಾಜಕಾರಣವನ್ನೂ ವ್ಯವಸ್ಥಿತವಾಗಿ ಮಾಡುತ್ತಿದ್ದರು. ಇದನ್ನು ನಾನು ನೆಗೆಟಿವ್ ಆಗಿ ಹೇಳುತ್ತಿಲ್ಲ. ಅಂತಿಮವಾಗಿ ಎಲ್ಲಾ ಕಾಲದ ಸಾಹಿತ್ಯವೂ ಆಯಾಕಾಲದ ಪರೋಕ್ಷ ರಾಜಕಾರಣವೇ. ಒಬ್ಬ ಲೇಖಕ Ultimately a politician of his language. ಭಾಷೆಯೇ ಒಂದು ರಾಜಕಾರಣ. ನುಡಿಯ ನಡೆಯನ್ನು ಗಮನಿಸಿ. ವಚನಕಾರರು ನುಡಿ ರಾಜಕಾರಣವನ್ನು ಶೈವತ್ವದಿಂದ ಮಾಡಿದರೆ, ದಾಸರು ಹರಿಯ ಭಜನೆಯಿಂದ ಇನ್ನೊಂದು ರಾಜಕಾರಣ ಮಾಡಿದರು. ಪಂಪನೂ ಹೀಗೇ ಮಾಡಿದ. ಜೈನ ಕವಿಯಾಗಿದ್ದ ಪಂಪ ತನ್ನ ದೊರೆ ಅರಿಕೇಸರಿಯನ್ನು ನಾಯಕನನ್ನಾಗಿಸಿ ಹಿಂದುತ್ವದ ಬದಲಿಗೆ ಜೈನತ್ವದ ಮಾನವ ಕುಲ ತಾನೊಂದೆ ವಲಂ ಎಂದು ಸಾರಿದ. ಪ್ರಭುತ್ವವನ್ನು ಎದುರು ಹಾಕಿಕೊಂಡು ಒಬ್ಬ ಲೇಖಕ ವಿರೋಧ ಪಕ್ಷದಂತೆ ಜನತೆಯ ಮೂಕರೋದನವನ್ನು ಕಾಣಿಸಬೇಕು. ಲಂಕೇಶರು ಅಂತಹ ಹೆಗ್ಗಳಿಕೆಯ ಕೆಲಸವನ್ನು ತಮ್ಮ ಪತ್ರಿಕೆಯ ಮೂಲಕ ಮಾಡಿಸುತ್ತಿದ್ದರು. ರಷ್ಯಾದ ಕ್ರಾಂತಿಗೆ ಟಾಲ್‌ಸ್ಟಾಯ್‌ನ ಬರಹಗಳು ಒತ್ತಾಸೆ ಆಗಿದ್ದವು. ಗಾರ್ಕಿಯ 'ಮದರ್' ಕಾದಂಬರಿ ಹೋರಾಟಗಾರರ ಮಾರ್ಗದರ್ಶಿ ಆಗಿತ್ತಲ್ಲವೆ? ನಾವು ಭಾಷೆಯನ್ನು ಹೇಗೆ, ಯಾವಾಗ, ಯಾವುದಕ್ಕಾಗಿ ಬಳಸುತ್ತೇವೆ ಎಂಬುದು ಮುಖ್ಯ. ಜಗತ್ತಿನ ಎಲ್ಲಾ ಸರ್ವಾಧಿಕಾರಿಗಳು ಭಾಷೆಯನ್ನು ಸರ್ವಾಧಿಕಾರಕ್ಕಾಗಿ ಬಳಸುತ್ತಿದ್ದಾಗ, ಲೇಖಕರು ಅದೇ ಭಾಷೆಯನ್ನು ಮಾನವತ್ವಕ್ಕಾಗಿ ಸೃಜನಶೀಲಗೊಳಿಸುತ್ತಿದ್ದರು. 'ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ಎಂದು ಬಂಡಾಯ ಚಳವಳಿ ಹೇಳಿದ್ದರಲ್ಲಿ ನಡೆನುಡಿಯೇ, ಭಾಷೆಯ ಅಖಂಡ ಸಂವೇದನೆಯೇ ಖಡ್ಗವಾಗಬೇಕು ಎಂಬ ಆಶಯ ಬಹಳ ಅರ್ಥಪೂರ್ಣವಾಗಿತ್ತು.



**ಪ್ರಭುತ್ವ ಎದುರು ಹಾಕಿ ಕೊಂಡು ಲೇಖಕ ವಿರೋಧ ಪಕ್ಷದಂತೆ ಜನತೆಯ ಮೂಕ ರೋದನ ಕಾಣಿಸಬೇಕು**

◆ **ಸರ್, ನನ್ನ ಪ್ರಶ್ನೆ ನಿಮ್ಮ ತಲೆಮಾರಿನ ಲೇಖಕರ ಕುರಿತಾಗಿತ್ತು...**

ಹಾಂ.... ಅಲ್ಲಿಗೇ ಬರುತ್ತಿರುವೆ. ಅವರೆಲ್ಲ ಸತ್ವಶಾಲಿ ಲೇಖಕರು. ಅನುಮಾನವೇ ಇಲ್ಲ. ಆ್ಯಕ್ಟಿವಿಸ್ಟ್ ಲೇಖಕರು. ನಟರಾಜ್ ಹುಳಿಯಾರ್ ನಮ್ಮ ಕಾಲದ ರಾಜಕೀಯ ಪ್ರಜ್ಞೆಯ ಒಳ್ಳೆಯ ಲೇಖಕ. ಅಬ್ದುಲ್ ರಶೀದ್ ಮಾಂತ್ರಿಕ ಕಥೆಗಾರ. ಆತನ ಸುಪ್ತಪ್ರಜ್ಞೆಯ ಕಥನಕಲೆ ಬಹಳ ಉನ್ನತವಾದದ್ದು. ಕೇಶವ ಮಳಗಿ, ವಿವೇಕ ಶಾನಭಾಗ, ಜಯಂತ ಕಾಯ್ಕಿಣಿ ನನಗೆ ಇಷ್ಟವಾದ ಲೇಖಕರು. ನೂರಾರು ಜನ ಲೇಖಕ ಮಿತ್ರರಿದ್ದಾರೆ. ಅವರ ಸಾಹಿತ್ಯ ನನಗೇನು ತಟ್ಟಿಯೇ ಇಲ್ಲ. ಇತ್ತೀಚಿನ ಒಬ್ಬನೇ ಒಬ್ಬ ಯುವ ಲೇಖಕರನ್ನೂ ನಾನು ಓದಿಲ್ಲ. ಓದಲು ಯತ್ನಿಸಿ ಅತ್ತ ಇಟ್ಟುಬಿಟ್ಟೆ.

◆ **ನಿಮ್ಮ ಅಭಿಪ್ರಾಯದ ಬಗ್ಗೆ ನನ್ನದೇನೂ ತಕರಾರಿಲ್ಲ. ನಿಮ್ಮ ನಂತರದ ಹೊಸಬರನ್ನು ಓದುವ ಮತ್ತು ಓದದೇ ಇರುವ ಸ್ವಾತಂತ್ರ್ಯ ನಿಮಗೆ ಇದ್ದೇ ಇದೆ. ಆದರೆ ಯಾಕೆ ಓದಲು ಮನಸ್ಸಾಗುತ್ತಿಲ್ಲ ಅನ್ನೋದನ್ನು ಕೇಳಬಹುದಲ್ಲವೆ? ಯುವ ಲೇಖಕರ ಬರವಣಿಗೆಯ ಯಾವ ಮಿತಿಗಳು ನಿಮ್ಮನ್ನು ಓದದಂತೆ ತಡೆದಿವೆ?**

ಆ ಕೊಡದಲ್ಲಿ ನೀರಿದ್ದರೆ ತಾನೆ ನಾನು ಕುಡಿಯಬಹುದು. ತಲೆ ಮೇಲೆ ಹೊತ್ತುಕೊಂಡು ಹೊರಡಬಹುದು. ಅನೇಕರು ಖಾಲಿ ಕೊಡಗಳ ಪೇರಿಸಿಟ್ಟು ಗಂಗಾಜಲವನ್ನ ತುಂಬಿಸಿರುವೆ ಎಂದರೆ, ಅಂತಹ ಕೊಡಗಳ ಒಡೆದು ಬಿಸಾಡಬೇಕು ಎನಿಸುತ್ತದೆ. ಇವತ್ತಿನ ಸಾಹಿತ್ಯದ